ಅಂಥ ಭೂಮಿಯ ಯಾವುದೇ ವರ್ಗಾವಣೆಯು ಅಕೃತ ಮತ್ತು ಶೂನ್ಯವಾಗಿರತಕ್ಕದ್ದು. ಹಾಗೆ ವರ್ಗಾವಣೆ ಮಾಡಲಾದ ಭೂಮಿಯು ಎಲ್ಲಾ ಪೂರ್ವಾಧಿಗಳಿಂದ ಮುಕ್ತವಾಗಿ ರಾಜ್ಯಸರ್ಕಾರದಲ್ಲಿ ನಿಹಿತವಾಗತಕ್ಕದ್ದು. 5ನೇ ಪ್ರಕರಣದ (5)ನೇ ಉಪ-ಪ್ರಕರಣದ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಅಂಥ ಭೂಮಿಯ ವರ್ಗಾವಣೆಗೆ ಅನ್ವಯವಾಗತಕ್ಕದ್ದು.

XX XX XX

ಅನುಬಂಧ III

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ದೊಡ್ಡಬಾತಿಯ ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ಕುರಿತು

1621(2326) ಶ್ರೀ ಎಸ್. ಅಂಗಾರ್ (ಸೂಳ್ಯ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ದೊಡ್ಡಬಾತಿ ಇಲ್ಲ ಕೆಲವರಿಗೆ ಸರ್ಕಾರಿ ತುಟ್ಟಿಭತ್ಯೆ ಕೊಡುವ ಬಗ್ಗೆ ಗೊತ್ತುವಳಿಯು ಈಗಾಗಲೇ ಸರ್ಕಾರದ ಮುಂದೆ ಇದ್ದಲ್ಲಿ, ಅದನ್ನು ರಾಜ್ಯ ಸರ್ಕಾರವು ಪರಿಗಣಿಸಬಹುದಾಗಿರುತ್ತದೆಂದು ಘನ ರಾಜ್ಯ ಉಚ್ಚ ನ್ಯಾಯಾಲಯವ WP-21568/2000ರಲ್ಲಿ ಕೊಟ್ಟಿರುವ ತೀರ್ಪಿನಲ್ಲಿ ಅವಲೋಕಿಸುವುದರ ವಿರುದ್ಧವಾಗಿ ಸದರಿ ಕಾರ್ಖಾನೆಯವರು ಹೊಸದಾಗಿ ಪ್ರಸ್ತಾವನೆ ಸಲ್ಲಿಸಿರುವುದು ನಿಜವೇ;

ಆ) ಹೌದಾದಲ್ಲಿ ಇದಕ್ಕೆ ಕಾರಣಗಳೇನು;

ಇ) ಇವುಗಳು ಸಕಾರಣಗಳೇ;

ಈ) ಅಲ್ಲವಾದರೆ ಇದು ಘನ ನ್ಯಾಯಾಲಯಕ್ಕೆ ಅಗೌರವ ತೋರಿದಂತಾಗಿರುವುದೇ;

ಉ) ಹೌದಾದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಚ್. ವಿಶ್ವನಾಥ್ (ಸಹಕಾರ ಸಚಿವರು) :

ಅ) ಆ) ಇ) ಗೌರವಾನ್ವಿತ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 21568-73/2000ರಲ್ಲಿ ನೀಡಿದ ತೀರ್ಪಿನ ನಂತರ ಕಾರ್ಖಾನೆ 15.4.94ರಲ್ಲಿ ಇಲಾಖೆಗೆ ಸಲ್ಲಿಸಿದೆಯೆಂದು ಹೇಳಿದ ಪ್ರಸ್ತಾವನೆಯನ್ನು ಪುನಃ ಸರ್ಕಾರಕ್ಕೆ ಸಲ್ಲಿಸಿ ಈ ಪ್ರಸ್ತಾವನೆಗೆ ಘಟನೋತ್ತರ ಮಂಜೂರಾತಿ ಕೋರಿರುತ್ತದೆ.

ಈ) ಉ) ಪ್ರಶ್ನೆ ಉದ್ಭವಿಸುವುದಿಲ್ಲ.

ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ) ದೊಡ್ಡಬಾತಿ ಇಲ್ಲಿ ಕೆಲವರಿಗೆ ನಿರ್ದೇಶಕರ ಪೂರ್ವಾನುಮತಿ ಪಡೆಯದೆ ಸರ್ಕಾರಿ ತುಟ್ಟಿ ಭತ್ಯೆ ನೀಡಿರುವುದು

1622(2327) ಶ್ರೀ ಅಂಗಾರ್ ಎಸ್. (ಸೂಳ್ಯ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ), ದೊಡ್ಡಬಾತಿ, ಇಲ್ಲಿ ಕೆಲವರಿಗೆ ಸಕ್ಕರೆ ನಿರ್ದೇಶಕರ ಪೂರ್ವಾನುಮತಿ ಪಡೆಯದೇ ಸರ್ಕಾರಿ ತುಟ್ಟಿಭತ್ಯೆ ಸೌಲಭ್ಯ ಕೊಟ್ಟು ನಂತರ ದಿನಾಂಕ 15.4.1994ರಲ್ಲಿ ಘಟನೋತ್ತರ ಮಂಜೂರಾತಿ ಕೋರಿ ಸಲ್ಲಿಸಿದ್ದ ಪ್ರಸ್ತಾವನೆಗೆ ಸಕ್ಕರೆ ನಿರ್ದೇಶಕರು ಮಂಜೂರಾತಿಯನ್ನು ಕೊಟ್ಟಿರುತ್ತಾರೆಯೇ ಅಥವಾ ತಿರಸ್ಕರಿಸಿರುತ್ತಾರೆಯೆ;